Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 3/2014

ಪ್ರಾ.ಸಾ. 2 ಚಾ.ಸಾ. 2

| | | |
|---|---|---|
| ಹೆಸರು | : | ಮಲ್ಲಣ್ಣಗೌಡ |
| ತಂದೆಯ ಹೆಸರು | : | ನಾಗಭೂಶಣಗೌಡ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಸಹ-ಶಿಕ್ಷಕರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗಂಗಾ ನಗರ ಯಾದಗಿರಿ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 28-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2010 ರಿಂದ 2014ರ ವರಗೆ ಸಹ-ಶಿಕ್ಷಕರು ಡಾ: ಬಿ.ಆರ್. ಅಂಬೇಡ್ಕರ ಹಿರಿಯ ಪ್ರಾಥಮಿಕ ಶಾಲೆ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 15.03.2014 ರಂದು ಲೋಕಾಯುಕ್ತ ಕಛೇರಿಂದ ನಮ್ಮ ಶಾಲೆಗೆ ಕೋರಿಕೆ ಪತ್ರ ಸಲ್ಲಿಸಿದ್ದು ಅದರಂತೆ ಮುಖ್ಯ ಗುರುಗಳು ನನ್ನನ್ನು ಮೌಖಿಕ ಆದೇಶದ ಮೇರೆಗೆ ಲೋಕಾಯುಕ್ತ ಕಛೇರಿ ಯಾದಗಿರಿಗೆ ಹೋಗುವಂತೆ ತಿಳಿಸಿದರು. ಬೆಳಿಗ್ಗೆ 9-45 ಗಂಟೆಗೆ ನಾನು ಲೋಕಾಯುಕ್ತ ಕಛೇರಿಗೆ ಹೋದೆ. ಅಲ್ಲಿ ಶಿವರೆಡ್ಡಿ ಎನ್ನುವವರು ಇದ್ದರು. ಅವರು ಸಹ ಜಿ.ಎಮ್.ಎಸ್. ಕನ್ಯಾ ಶಾಲೆ ಯಾದಗಿರಿಯ ಸಹ-ಶಿಕ್ಷಕರು. ಅಲ್ಲಿ ಪಿಐ ಬಿ.ಬಿ. ಪಾಟೀಲ ಇದ್ದರು ಅವರಿಗೆ ನಾನು ಪರಿಚಯ ಮಾಡಿಕೊಂಡೆ. ಅಲ್ಲಿ ಒಬ್ಬ ವ್ಯಕ್ತಿ ಕುಳಿತ್ತಿದ್ದ. ಆತನ ಹೆಸರು ಮಹ್ಮದ ಇಸ್ಮಾಯಿಲ್ ತಂದೆ ಮಹ್ಮದ ಇಬ್ರಾಹಿಂ ಪಿಐ ಅವರು ಆತನ ಪ್ರಕರಣ ದಾಖಲಿಸಲು ಬಂದಿದ್ದಾರೆ ಅದಕ್ಕೆ ನೀವು ಪಂಚರಾಗಿ ಸಹಕರಿಸಬೇಕು ಎಂದು ಹೇಳಿದರು ಅದಕ್ಕೆ ನಾವು ಒಪ್ಪಿಕೊಂಡೆವು. ಆತ ಕೊಟ್ಟ ಅರ್ಜಿ ಓದಿದಾಗ ಅದರಲ್ಲಿ ಬೆನಕನಳ್ಳಿ ಸರ್ವೆ ನಂ. 13 ರಲ್ಲಿ 6 ಎಕರೆ 2 ಗುಂಟೆ ಜಮೀನು ಮಹ್ಮದ ಇಸ್ಮಾಯಿಲ್ ಆತನ ತಂದೆ ಮತ್ತು ಆತನ ದೊಡ್ಡಪ್ಪನ ಹೆಸರಿನಲ್ಲಿ ಇತ್ತು. ಆ ಪಹಣಿಯ ಕಾಲಂ. 12 ರಲ್ಲಿ 1983-84, 1988-89, 1992-93ರ ವರೆಗೆ ಯಾವುದೆ ಷರಾ ಇರುವುದಿಲ್ಲ ಮತ್ತು ಖಾಲಿ ಇತ್ತು ಅದರಲ್ಲಿ 15 ವರ್ಷಗಳ ಕಾಲ ಪರಬಾರೆ ಮಾಡಬಾರದು

ಎಂದು ನಮೂದಿಸಿತ್ತು. ಆ ರೀತಿ ಷರಾ 2013ರ ವರೆಗೆ ಇತ್ತು. 2014 ರಲ್ಲಿ ಪಹಣಿ ತೆಗೆಸಿ ನೋಡಿದಾಗ ಸಹ ಅದೇ ರೀತಿ ಷರಾ ಇತ್ತು ಅದಕ್ಕಾಗಿ ದಿಃ 30.01.2014 ರಂದು ಮಹ್ಮದ ಇಸ್ಮಾಯಿಲ್ ಅವರ ತಂದೆ ಒಂದು ಅರ್ಜಿಯನ್ನು ಶಹಾಪೂರ ತಹಶೀಲ್ದಾರ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಆ ಅರ್ಜಿ ಸಲ್ಲಿಸಿ ಅಲ್ಲಿರುವಂತಹ ಎಫ್.ಡಿ.ಎ. ಮಲ್ಲಪ್ಪ ವಗ್ಗಿ ಅವರನ್ನು ಬೇಟಿಯಾದಾಗ ಅವರು ಷರಾ ತಿದ್ದುಪಡಿ ತೆಗೆಯಲ್ಲಿ ರೂ.4,000/- ಲಂಚ ಕೇಳುತ್ತಾರೆ. ಆಗ ಫಿರ್ಯಾದಿ ತಂದೆ ಬಡವ ಇದ್ದು ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದಕ್ಕೆ 500/- ರೂ ಕಡಿಮೆ ಮಾಡಿ 3,500/- ರೂ ಕೊಡುವಂತೆ ಹೇಳಿದ್ದು ಅವರಿಗೆ ಲಂಚ ಕೊಡಲು ಮನಸಿಲ್ಲದ ಕಾರಣ ದಿಃ 14.03.2014 ರಂದು ಲೋಕಾಯುಕ್ತ ಕಛೇರಿಗೆ ಬಂದು ಬೇಟಿಯಾಗಿರುವದಾಗಿ ಹೇಳಿದರು. ಆ ಪಿಐ ರವರು ವೈಸ ರೆಕಾರ್ಡರ ಫಿರ್ಯಾದಿಗೆ ಕೊಟ್ಟಿದ್ದು ಸಂಭಾಷಣೆ ದಾಖಲು ಮಾಡಿಕೊಂಡು ಬರುವಂತೆ ಹೇಳಿ ಕಳುಹಿಸಿದರು. ಅದೇ ದಿನ ಫಿರ್ಯಾದಿಯ ತಂದೆ ತಹಶೀಲ್ದಾರ ಕಛೇರಿ ಶಹಾಪೂರಕ್ಕೆ ಹೋಗಿ ಆರೋಪಿ ಮತ್ತು ಆತನ ನಡುವೆ ನಡೆದ ಸಂಭಾಷಣೆಯನ್ನು ರೇಕಾರ್ಡ ಮಾಡಿಕೊಂಡು ತಂದು ಹಾಜರುಪಡಿಸಿರುತ್ತಾರೆ. ದಿಃ 15.03.2014 ರಂದು ಬಂದು ದೂರು ಕೊಟ್ಟಿದ್ದಾಗಿ ಹೇಳಿದರು. ನಮ್ಮ ಮೇಲಾಧಿಕಾರಿಗಳಿಗೆ ಕೊಟ್ಟ ಪತ್ರವನ್ನು ನಿ.ಪಿ.33 ಎಂದು ಗುರುತಿಸಲಾಯಿತು. ವೈಸ ರೇಕಾರ್ಡನಲ್ಲಿ ಇದ್ದ ಧ್ವನಿಯನ್ನು ನಮಗೆ ಕೇಳಿಸಿದರು. ಆ ಬಗ್ಗೆ ದೂರು ಕೊಟ್ಟಿದ್ದು ಅದು ನಿ.ಪಿ.1 ಎಂದು ಗುರುತಿಸಲಾಗಿದೆ. ಫಿರ್ಯಾದಿ ಕೊಟ್ಟ ದೂರು ಮತ್ತು ರೇಕಾರ್ಡನಲ್ಲಿ ಇದ್ದ ಧ್ವನಿ ಒಂದೇ ಇತ್ತು. ಧ್ವನಿ ಕೇಳಿಸಿದ ನಂತರ ಸದರಿ ವೈಸ ರೇಕಾರ್ಡನ್ನು ಕಂಪ್ಯೂಟರಗೆ ಹಾಕಿ ಸಿ.ಡಿ. ಮಾಡಿಸಿ ಅದನ್ನು ಸೀಲ್ ಮಾಡಿದರು ನಾನು ಮತ್ತು ಪಂಚರು ಸಹಿ ಮಾಡಿದೆವು. ಸದರಿ ಸಿ.ಡಿ.ಯನ್ನು ಮು.ಮಾ.2 ಎಂದು ಗುರುತಿಸಲಾಗಿದೆ. ಸದರಿ ವೈಸ ರೇಕಾರ್ಡರನಲ್ಲಿರುವ ಸಂಭಾಷಣೆಯನ್ನು ಒಂದು ದಾಖಲೆಯಲ್ಲಿ ಬರೆದಿದ್ದು ಅದಕ್ಕೆ ನಾನು ಸಹಿ ಮಾಡಿದ್ದು ಸದರಿ ದಾಖಲೆ ನಿ.ಪಿ.31 ಆಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.31(ಎ) ಎಂದು ಗುರುತಿಸಲಾಯಿತು. ಶಿವರೆಡ್ಡಿ ಅವರ ಸಹಿಯನ್ನು ನಿ.ಪಿ.31(ಬಿ) ಎಂದು ಗುರುತಿಸಲಾಯಿತು. ಸದರಿ ಶಿವರೆಡ್ಡಿ ಅವರು ಕೋವಿಡ್ ನಲ್ಲಿ ತೀರಿಕೊಂಡಿದ್ದಾರೆ.

3. ಮಹ್ಮದ ಇಸ್ಮಾಯಿಲ ಅವರಿಗೆ ಹಣ ತಂದ ಬಗ್ಗೆ ಪಿಐ ರವರು ಕೇಳಿದಾಗ ಸದರಿ ಹಣವನ್ನು ಇಸ್ಮಾಯಿಲ್ ಕೊಟ್ಟಿದ್ದನ್ನು ಶಿವರೆಡ್ಡಿಯವರು ಎಣಿಸಿ ಅದರ ನಂಬರ ಮತ್ತು ಮೌಲ್ಯವನ್ನು ನಾನು ಬರೆದುಕೊಂಡೆ. ನಂತರ ನೀಲಕಂಠ ಪೊಲೀಸರಿಗೆ ಫಿನಾಪ್ತಲಿನ ಪೌಡರನ್ನು ನೋಟುಗಳಿಗೆ ಸವರುವಂತೆ ಹೇಳಿದರು. ಫಿನಾಪ್ತಲಿನ ಪೌಡರ ಮತ್ತು ಸೋಡಿಯಂ ಕಾರ್ಬೋನೇಟ ಇವುಗಳ ಗುಣಧರ್ಮ ಹೇಳಿದರು. ನಾನು ಬರೆದ ನೋಟುಗಳ ನಂಬರನ ದಾಖಲೆಯನ್ನು ನಿ.ಪಿ.4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಶಿವರೆಡ್ಡಿ ಅವರ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಸದರಿ ಹಣವನ್ನು ಮಹ್ಮದ ಇಸ್ಮಾಯಿಲ್

ಅವರ ಶರ್ಟನ ಜೇಬಿಗೆ ಇಡುವಂತೆ ಹೇಳಿದರು ಅದರಂತೆ ಶಿವರೆಡ್ಡಿ ಆ ಜೇಬನಲ್ಲಿ ಏನಾದರೂ ಇದೇಯೇ ಎಂದು ಪರಿಶೀಲಿಸಿ ನಂತರ ಜೇಬಿನಲ್ಲಿ ಆ ಹಣವನ್ನು ಇಟ್ಟ. ನಂತರ ಸೋಡಿಯಂ ಕಾರ್ಬೋನೇಟ ದ್ರಾವಣವನ್ನು ಶುದ್ಧವಾದ ನೀರಿನಲ್ಲಿ ಬಟ್ಟಲಿನಲ್ಲಿ ಹಾಕಿ ತಯಾರಿಸಿ ಪಂಚ ಸಾಕ್ಷಿ ಶಿವರೆಡ್ಡಿ ಅವರ ಕೈ ಬೆರಳುಗಳನ್ನು ಅದರಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಧ್ರಾವಣವನ್ನು 2 ಬಾಟಲಗಳಲ್ಲಿ ತುಂಬಿ ಅವುಗಳಿಗೆ ಸೀಲ ಮಾಡಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿದರು. ಅವು ಆರ್ಟಿಕಲ್-2 ಮತ್ತು 3 ಇದ್ದು ಮು.ಮಾ.3 ಮತ್ತು 4 ಆಗಿರುತ್ತವೆ. ದಿಃ 15.03.2014 ರಂದು ಲೋಕಾಯುಕ್ತ ಕಛೇರಿಯಲ್ಲಿ ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಆ ಕಾಲಕ್ಕೆ ಫೋಟೊಗಳನ್ನು ಸಹ ತೆಗೆದರು. ಸದರಿ ಪಂಚನಾಮೆಯಲ್ಲಿರುವ ಸಹಿಯನ್ನು ನಿ.ಪಿ.19 ಆಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.19(ಬಿ) ಎಂದು ಮತ್ತು ಶಿವರೆಡ್ಡಿಯ ಸಹಿಯನ್ನು ನಿ.ಪಿ.19(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೊಗಳು ನಿ.ಪಿ.5 ರಿಂದ 17 ತೆಗೆದಿರುತ್ತಾರೆ. ನಂತರ ಎಲ್ಲರೂ ಕೈ ತೊಳೆದುಕೊಂಡೆವು.

4. ಅದೇ ದಿನ ಬೆಳಿಗ್ಗೆ 11-15 ಗಂಟೆಗೆ ನಾವು ಲೋಕಾಯುಕ್ತ ಕಛೇರಿ ಬಿಟ್ಟು ಎರಡು ಜೀಪಗಳಲ್ಲಿ 12-15 ಗಂಟೆಗೆ ಭೀ-ಗುಡಿ ರೋಡಿಗೆ ಇರುವ ಕೆ.ಇ.ಬಿ. ಹತ್ತಿರ ಹೋದೆವು. ತನಿಖಾ ಸಾಮಾಗ್ರಿಗಳನ್ನು ತೆಗೆದುಕೊಂಡಿದ್ದರು. ಶಹಾಪೂರ ತಹಶೀಲ್ದಾರ ಕಛೇರಿಗೆ ಹೋದಾಗ 12-15 ಗಂಟೆ ಆಗಿತ್ತು. ನಂತರ ವಾಹನದಿಂದ ಕೆಳಗೆ ಇಳಿದು ನಾನು ಮತ್ತು ಮಹ್ಮದ ಇಸ್ಮಾಯಿಲ್ ಇವರನ್ನು ಪಿಐ ಅವರು ತಹಶೀಲ್ದಾರ ಕಛೇರಿಯ ಒಳಗೆ ಹೋಗುವಂತೆ ಹೇಳಿದರು. ನಮ್ಮ ಜೊತೆ ಬಂದವರು ಅಲ್ಲಲ್ಲಿ ನಿಂತುಕೊಂಡು ನಮ್ಮನ್ನು ಗಮನಿಸುತ್ತಿದ್ದರು. ನಾವು ಒಳಗೆ ಹೋದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಮಹ್ಮದ ಇಸ್ಮಾಯಿಲ್ ಅವರಿಗೆ ನಮಸ್ತೆ ಎಂದು ಹೇಳಿದ್ದು ನಮ್ಮನ್ನು ಕುಡುವಂತೆ ಹೇಳಿ ಮಹ್ಮದ ಇಸ್ಮಾಯಿಲ ಅವರು ಅವರ ಹಿಂದೆ ಹೋದರು. ನಾನು ಅವರನ್ನು ಹಿಂಬಾಲಿಸಿದೆ. ಮಹ್ಮದ ಇಸ್ಮಾಯಿಲ್ ಅವರು ಆರೋಪಿಯನ್ನು ಬೆನಕನಳ್ಳಿ ಹೊಲದ ಷರಾ ತಿದ್ದುಪಡಿ  ಕೆಲಸ ಏನಾಯಿತು ಎಂದು ಕೇಳಿದ್ದಕ್ಕೆ ಆರೋಪಿ ನಾನು ಕೇಳಿದ ಹಣ ತಂದಿದ್ದಿಯಾ ಎಂದು ಕೇಳಿದರು ಆಗ ಫಿರ್ಯಾದಿ ಹಣ ತಂದಿದ್ದೇನೆ ಎಂದು ಹೇಳಿದ್ದು 3,500/- ರೂಗಳನ್ನು ಆತನ ಟೇಬಲ ಎಡ ಬಾಗದ ಡೆಸ್ಕನಲ್ಲಿ ಹಾಕುವಂತೆ ಹೇಳಿದ. ಆಗ ಫಿರ್ಯಾದಿ ಹಣವನ್ನು ಡೆಸ್ಕನಲ್ಲಿ ಹಾಕಿದ್ದು ನಾನು ಮತ್ತು ಫಿರ್ಯಾದಿ ಹೊರಗೆ ಬಂದು ಕರವಸ್ತ್ರದಿಂದ ಮುಖ ಒವರಿಸಿಕೊಂಡು ಸಿಗ್ನಲ ಕೊಟ್ಟೆವು. ಅಲ್ಲಿದ್ದ ಪೊಲೀಸರು ಎಲ್ಲರೂ ಒಳಗೆ ಬಂದರು. ಪೊಲೀಸರು ಆರೋಪಿಯ ಎರಡು ಕೈಗಳನ್ನು ಹಿಡಿದರು. ಮಹ್ಮದ ಇಸ್ಮಾಯಿಲ್ ಆರೋಪಿ 3,500/- ಲಂಚ ಪಡೆದಿದ್ದಾನೆ ಎಂದು ಹೇಳಿದ. ಸೋಡಿಯಂ ಕಾರ್ಬೋನೇಟ ದ್ರಾವಣ ತಯಾರಿಸಿ ಆರೋಪಿಯ ಬಲಗೈ  ಬೆರಳು ಅದ್ದಿಸಿದಾಗ ದ್ರಾವಣ ಯಾವುದೇ ಬಣ್ಣಕ್ಕೆ ತಿರುಗಲಿಲ್ಲ ಅದನ್ನು ಆರ್ಟಿಕಲ್-4 ಮತ್ತು 4(ಎ) ಆಗಿದ್ದು ಅವುಗಳನ್ನು

ಮು.ಮಾ.6 ಮತ್ತು 7 ಎಂದು ಗುರುತಿಸಲಾಗಿದೆ. ನಂತರ ಆರೋಪಿಯ ಎಡಗೈ ಬೆರಳು ಅದ್ದಿಸಿದಾಗ ಧ್ರಾವಣ ಯಾವುದೇ ಬಣ್ಣಕ್ಕೆ ತಿರುಗಲಿಲ್ಲ ಅದನ್ನು ಆರ್ಟಿಕಲ್-5 ಮತ್ತು 5(ಎ) ಆಗಿದ್ದು ಅವುಗಳನ್ನು ಮು.ಮಾ.8 ಮತ್ತು 9 ಎಂದು ಗುರುತಿಸಲಾಗಿದೆ. ಡೆಸ್ಕನಲ್ಲಿ ಇದ್ದ ನೋಟುಗಳನ್ನು ಪಿಐ ರವರು ನನಗೆ ತೆಗೆಯುವಂತೆ ಹೇಳಿದರು. ನಾನು ಸದರಿ ನೋಟುಗಳನ್ನು ತೆಗೆದು ಅವುಗಳ ಮೌಲ್ಯ ಮತ್ತು ನಂಬರನ್ನು ಮೊದಲು ತಯಾರಿಸಿದ ದಾಖಲೆಗೆ ಹೋಲಿಕೆ ಮಾಡಿದಾಗ ಅವು ಹೊಂದಾಣಿಕೆಯಾಗುತ್ತಿತ್ತು ಸದರಿ ದಾಖಲೆ ನಿ.ಪಿ.4 ಆಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.4(ಸಿ) ಎಂದು ಶಿವರೆಡ್ಡಿ ಅವರ ಸಹಿಯನ್ನು ನಿ.ಪಿ.4(ಡಿ) ಎಂದು ಗುರುತಿಸಲಾಯಿತು. ಸದರಿ ನೋಟುಗಳನ್ನು ಒಂದು ಕವರಗೆ ಹಾಕಿ ಸೀಲ್ ಮಾಡಿದರು. ಅದಕ್ಕೆ ನಾವು ಸಹಿ ಮಾಡಿದ ಚೀಟಿ ಅಂಟಿಸಿದರು. ಸದರಿ ಡೆಸ್ಕನ ಒಳಗೆ ಹತ್ತಿಯಿಂದ ಒರೆಸಿ ಆ ಹತ್ತಿಯನ್ನು ಸೋಡಿಯಂ ಕಾರ್ಬೋನೇಟ ಧ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಬಾಟಲಗಳಲ್ಲಿ ಹಾಕಿದ್ದು ಅದು ಆರ್ಟಿಕಲ್-7 ಮತ್ತು 7(ಎ) ಎಂದು ಗುರುತು ಮಾಡಿದರು ಸದರಿ ಬಾಟಲಗಳ ಮೇಲೆ ನಮ್ಮ ಸಹಿ ಇರುವ ಚೀಟಿ ಇದೆ. ಅವು ಮು.ಮಾ.10 ಮತ್ತು 11 ಎಂದು ಗುರುತಿಸಲಾಗಿದೆ. ವೈಸ ರೇಕಾರ್ಡರನ್ನು ಮಹ್ಮದ ಇಸ್ಮಾಯಿಲ್ ಜೇಬಿನಲ್ಲಿ ಇಟ್ಟುಕೊಂಡು ಹೋಗಿದ್ದ ಅದನ್ನು ಲೋಕಾಯುಕ್ತ ಪೊಲೀಸರು ಪಡೆದುಕೊಂಡು ಶಿರೇಸ್ತೆದಾರ ಪರಶುರಾಮ ಅವರಿಗೆ ಕೇಳಿಸಿದ ಅವರು ನಮ್ಮ ಕಛೇರಿಯ ಮಲ್ಲಪ್ಪ ಅವರ ಧ್ವನಿ ಎಂದು ಗುರುತಿಸಿದರು. ಸದರಿ ಸಂಭಾಷಣೆಯನ್ನು ಸಿ.ಡಿ. ಮಾಡಿದ್ದು ಅದು ಆರ್ಟಿಕಲ್-8 ಆಗಿದ್ದು ಅದನ್ನು ಮು.ಮಾ.12 ಎಂದು ಗುರುತಿಸಲಾಗಿದೆ. ಕಾಗದ ಪತ್ರಗಳನ್ನು ಕೇಳಿದಾಗ ಅದು ಅಲಮಾರಾದಲ್ಲಿ ಇದೆ ಎಂದು ಹೇಳಿದ. ನಂತರ ಎಲ್ಲ ದಾಖಲೆಗಳನ್ನು ಅಲಮಾರಾದಿಂದ ತೆಗೆದು ಅವುಗಳನ್ನು ವಶಕ್ಕೆ ಪಡೆದು ಸೀಲ್ ಮಾಡಿದೆವು. ಸದರಿ ದಾಖಲಾತಿಗಳನ್ನು ಒಟ್ಟಾಗಿ ನಿ.ಪಿ.34 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು, ಶಿವರೆಡ್ಡಿ ಪಂಚ, ಪಿಐ, ಎಲ್ಲರು ಸಹಿ ಮಾಡಿದೆವು. ಸಾಕ್ಷಿಯ ಸಹಿಯನ್ನು ನಿ.ಪಿ.34(ಎ) ಎಂದು ಶಿವರೆಡ್ಡಿ ಅವರ ಸಹಿಯನ್ನು ನಿ.ಪಿ.34(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯ ವಿನಂತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.